6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ಅ) ವಿಷಯ : ಕರ್ನಾಟಕ ಗೃಹ ಮಂಡಳಿಯವರು, ಹಾಸನ ಜಿಲ್ಲಾ ಮತ್ತು ತಾಲ್ಲೂಕು, ದಾಸನಕೊಪ್ಪಲು ಗ್ರಾಮದ 500 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವುದರ ವಿರುದ್ಧ ಸುಮಾರು 2000 ಜನ ರೈತರು ಧರಣಿ ಮಾಡುತ್ತಿರುವ ಬಗ್ಗೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಕಳೆದ 4–5 ದಿನಗಳಿಂದ ಹಾಸನ ಜಿಲ್ಲಾಧಿಕಾರಿ ಕಛೇರಿ ಮುಂದೆ ರೈತರು ಎತ್ತು, ಗಾಡಿ, ಕುಟುಂಬ ಸಮೇತ ಬಂದು ಧರಣಿ ಕುಳಿತಿದ್ದಾರೆ. ಒಟ್ಟು 2000 ಜನ ಖಾತೆದಾರರಿದ್ದು, 5 ಗುಂಟೆ, 10 ಗುಂಟೆ ಜಮೀನು ಇರುವವರ 500 ಎಕರೆ ಜಮೀನನ್ನು Housing Board ನವರು 2007ರಲ್ಲಿ 4(1) notification ಮಾಡಿದ್ದು, ಈಗ 6(1) notification ಮಾಡಿದ್ದಾರೆ. ಒಂದು ಕಡೆ ವಸತಿಹೀನರಿಗೆ ವಸತಿ ಕಲ್ಪಿಸಿಕೊಡಬೇಕು ಎಂಬುದು ನ್ಯಾಯಯುತವಾದುದೇ. ಹಾಗೆಂದು ಹೇಳಿ, ರೈತರನ್ನು ವಸತಿಹೀನರನ್ನಾಗಿ ಮಾಡುವುದು ಎಷ್ಟರಮಟ್ಟಿಗೆ ಸರಿ? ಆದುದರಿಂದ, ದಯಮಾಡಿ, ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ, 6(1) notification ಅನ್ನು ಹಿಂತೆಗೆದುಕೊಳ್ಳುವುದಕ್ಕೆ ಆದೇಶ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)(ವಸತಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕಸಬಾ ಹೋಬಳಿಯ ಈ ಕೆಳಕಂಡ ಗ್ರಾಮಗಳಲ್ಲಿ ಆ ಗ್ರಾಮಗಳ ಮುಂದೆ ಕಾಣಿಸಿದ ವಿಸ್ತೀರ್ಣದ ಜಮೀನುಗಳನ್ನು ಕರ್ನಾಟಕ ಗೃಹ ಮಂಡಳಿಯು, ವಸತಿ ಯೋಜನೆಗಾಗಿ ಭೂ–ಸ್ವಾಧೀನಪಡಿಸಿಕೊಳ್ಳಲು, ದಿನಾಂಕ: 21–6–2007ರಂದು, ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಅಧಿಸೂಚನೆಯು, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 7–5–2007 ರಂದು, ಪ್ರಕಟಗೊಂಡಿರುತ್ತದೆ.

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಅಧಿಸೂಚನೆ ಹೊರಡಿಸಿದ ಒಟ್ಟು ವಿಸ್ತೀರ್ಣ
1	ಚಿಕ್ಕಕೊಂಡಗೋಳ	397 ಎಕರೆ 81/2 ಗುಂಟೆ
2	ಮಾವಿನಹಳ್ಳಿ	124 ಎಕರೆ 20 ಗುಂಟೆ
3	ಸತ್ಯಮಂಗಲ	76 ಎಕರೆ 181/2 ಗುಂಟೆ
	ಒಟ್ಟು ವಿಸ್ತೀರ್ಣ	598 ಎಕರೆ 07 ಗುಂಟೆ

ಈ ಅಧಿಸೂಚನೆಯ ನಂತರ, ಒಟ್ಟು 540 ರೈತರು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಆ ಬಗ್ಗೆ ಗ್ರಾಮವಾರು ವಿವರ ಈ ಕೆಳಕಂಡಂತಿದೆ :

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಆಕ್ಷೇಪಣೆ ಸಲ್ಲಿಸಿದ ರೈತರ ಸಂಖ್ಯೆ
1	ಚಿಕ್ಕಕೊಂಡಗೋಳ	442
2	ಮಾವಿನಹಳ್ಳಿ	42
3	ಸತ್ಯಮಂಗಲ	56
	ಒಟ್ಟು	540

ಹೀಗೆ, ಸ್ವೀಕರಿಸಿದ ಆಕ್ಷೇಪಣೆಗಳ ಬಗ್ಗೆ, ದಿನಾಂಕ: 6–12–2008 ರಿಂದ 7–10–2009 ರವರೆಗೆ, ಹಾಸನ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ, ಭೂಸ್ವಾಧೀನ ಕಾಯ್ದೆಯ ಕಲಂ 5(1)ರನ್ವಯ, ಪ್ರತಿಯೊಬ್ಬರಿಗೂ ನೋಟಿಸ್ ನೀಡಿ, ವಿಶೇಷ ಭೂಸ್ವಾಧೀನಾಧಿಕಾರಿಗಳು, ವಿಚಾರಣೆ ಮಾಡಿರುತ್ತಾರೆ.

ವಿಚಾರಣೆ ವೇಳೆಯಲ್ಲಿ, ಆಕ್ಷೇಪಣೆ ಬಗ್ಗೆ ಪೂರ್ಣ ವಿವರಗಳನ್ನು ಪಡೆದುಕೊಂಡ ನಂತರ, ಈ ಭೂಮಿಯನ್ನು ಪರಿಶೀಲಿಸಲು, ದಿನಾಂಕ: 9–12–2009ರಂದು ಸ್ಥಳಕ್ಕೆ ಅಧಿಕಾರಿಗಳು ಭೇಟಿಕೊಟ್ಟಾಗ, ಆ ಸಂದರ್ಭದಲ್ಲಿ ದಾಸರಕೊಪ್ಪಲು ಗ್ರಾಮದಲ್ಲಿ ಗುಂಪೊಂದು, ಅಧಿಕಾರಿಗಳನ್ನು ತಡೆಗಟ್ಟಿ ಅಧಿಕಾರಿಗಳಿದ್ದ ವಾಹನಗಳನ್ನು ಜಖಂಗೊಳಿಸಿತಲ್ಲದೇ, ಹಾಜರಿದ್ದ ಅಧಿಕಾರಿಗಳಿಗೆ ಬೆದರಿಕೆ ಹಾಕಿ, ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳುವುದಿಲ್ಲವೆಂಬಂತೆ ಅವರಿಂದ ಒತ್ತಾಯ ಪೂರ್ವಕವಾಗಿ ಪತ್ರವನ್ನು

ಸಹ ಬರೆಸಿಕೊಂಡಿರುತ್ತಾರೆ. ಈ ಬಗ್ಗೆ, ಅದೇ ದಿನ ಹಾಸನ ನಗರ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿದೆ.

ನಂತರ, ದಾಖಲಾತಿಗಳನ್ನು ಪರಿಶೀಲಿಸಿ, ಹಾಸನದಲ್ಲಿ ವಸತಿ ನಿವೇಶನಗಳನ್ನು ಕೋರಿ, 1400 ಹೆಚ್ಚಿನ ಅರ್ಜಿದಾರರು ಕರ್ನಾಟಕ ಗೃಹ ಮಂಡಳಿಗೆ ನೋಂದಾಯಿಸಿ ಅರ್ಜಿಗಳನ್ನು ಪರಿಗಣಿಸಿ, ಅದರಂತೆ, ಈ ಭೂಮಿಯು ವಸತಿ ಯೋಜನೆಗೆ ಅಗತ್ಯವಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಂಡು, ದಿನಾಂಕ: 18–1–2010ರಂದು, ಭೂಸ್ವಾಧೀನ ಕಾಯ್ದೆಯ ಕಲಂ 6(1)ರನ್ವಯ, ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆಯು, ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 4–2–2010ರಂದು ಪ್ರಕಟಗೊಂಡಿದ್ದು ಮುಂದಿನ ಕ್ರಮ ಬಾಕಿಯಿರುತ್ತದೆ.

ಮಾನ್ಯ ಸದಸ್ಯರಾದ ಸಿ.ಟಿ. ರವಿಯವರು ವಿಷಯ ಪ್ರಸ್ತಾಪಿಸಿ 6(1) notification ಅನ್ನು ಕೈಬಿಡಬೇಕೆಂದು ಹೇಳಿದ್ದಾರೆ. ಅದರ process ಎಲ್ಲ ನಡೆಯುತ್ತಿದೆ. ಈಗಾಗಲೇ ಹೇಳಿದ ಪ್ರಕಾರ, 1400ಕ್ಕೂ ಹೆಚ್ಚು ಅರ್ಜಿದಾರರು ನಮಗೆ ನಿವೇಶನ ಬೇಕೆಂದು ಹೇಳುತ್ತಿದ್ದು ಇಷ್ಟೊಂದು ಬೇಡಿಕೆ ಇದೆ. ನಿವೇಶನದಾರರಿಗೂ ಸಹಿತ ಬೇಡಿಕೆಗನುಗುಣವಾಗಿ ನಿವೇಶನಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯವಿದೆ. ಆ ದೃಷ್ಟಿಯಿಂದ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಸಿ.ಟಿ.ರವಿ : ಸತ್ಯಮಂಗಲದಲ್ಲಿ ಮಾಡಿರುವುದರಲ್ಲಿ ಖಾಲಿ ಇದೆ. ಡೆವಲಪ್ ಮಾಡಿ ಸೈಟ್ ಕೊಟ್ಟಿದ್ದರಲ್ಲಾ ಅಲ್ಲಿಯೇ ಯಾರು ಮನೆ ಕಟ್ಟಿಲ್ಲ. ಅಂದರೆ ಮನೆ ಇದ್ದವರೆ ಮತ್ತೆ ನಿವೇಶನಕ್ಕೆ ಅರ್ಜಿ ಹಾಕಿದ್ದಾರೆಯೇ ಹೊರತು ಅವಶ್ಯಕವಾಗಿ ಮನೆ ಕಟ್ಟತಕ್ಕಂಥವರು ಸತ್ಯಮಂಗಲದಲ್ಲಿ ಕೊಟ್ಟಿರುವುದರಲ್ಲಿ ಮನೆ ಕಟ್ಟಿಲ್ಲ. ಅದನ್ನೆ ಕ್ಯಾನ್ಸಲ್ ಮಾಡಿ ನಿವೇಶನ ಕೊಡುವುದಕ್ಕೆ ಬರುತ್ತದೆ. ಇಲ್ಲಿರತಕ್ಕಂಥವರೆಲ್ಲ 10–20 ಗುಂಟೆ ಇರತಕ್ಕಂಥವರು. ಇದೇ ಏರಿಯಾದಲ್ಲಿರತಕ್ಕಂಥ ಬಲಾಢ್ಯರ ಜಮೀನನ್ನು ಬಿಟ್ಟಿದ್ದಾರೆ.

ಅಧ್ಯಕ್ಷರು : ಆಯಿತು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ ಬಿಡಿ.